ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ–ರವರ ಕಛೇರಿ,
ಕಾ&ಪಾ ಉಪ–ವಿಭಾಗ, ಚಾವಿಸನಿನಿ,
ಬಿಳಿಕೆರೆ. Telephone No: 9448499992

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Office Of: Assistant Executive Engineer Ele
O&M Sub-Division, Bilikere
Web Site: https://cescmysore.karnataka.gov.in
E-mail ID:

Company Identity Number(CIN): U40109KA2004SGC035177

ಕ್ರಮಾಂಕ: ಚಾವಿಸನಿನಿ/ಉ.ವಿ/ಬಿಳಿಕೆರೆ/ಸ.ಕಾ.ನಿ.ಇಂ(ವಿ)/ಸ.ಇಂ(ತಾಂ)/2023-24/993 ದಿನಾಂಕ:30.09.2023

ದಿನಾಂಕ:29.09.2023 ರಂದು ಮಧ್ಯಾಹ್ನ 03:00 ಗಂಟೆಗೆ ಶ್ರೀ ಶಿವಕುಮಾರ್.ಕೆ.ಬಿ, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ ಚಾವಿಸನಿನಿ ಮೈಸೂರು ರವರ ಅಧ್ಯಕ್ಷತೆಯಲ್ಲಿ ನಡೆದ ಬಿಳಿಕೆರೆ ಕಾರ್ಯ ಮತ್ತು ಪಾಲನ ಉಪವಿಭಾಗದ ವಿದ್ಯುತ್ ಗ್ರಾಹಕರ ಜನ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು:**

1. ಶ್ರೀ ಶಿವಕುಮಾರ್.ಕೆ.ಬಿ, ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ಮತ್ತು ಪಾ ವೃತ್ತ ಚಾವಿಸನಿನಿ ಮೈಸೂರು.
2. ಶ್ರೀಮತಿ ವಿಜಯರತ್ನ.ಸಿ ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಬಿಳಿಕೆರೆ.
3. ಶ್ರೀಮತಿ ಸುಕ್ರಮ್ಮ, ಹಿರಿಯ ಸಹಾಯಕರು(ಪ್ರಭಾರ), ಕಂದಾಯ ಶಾಖೆ, ಬಿಳಿಕೆರೆ ಉಪ ವಿಭಾಗ.
4. ಶ್ರೀ ಮಣಿಕಂಠ, ಸಹಾಯಕ ಇಂಜಿನಿಯರ್ (ತಾಂ), ಕಾರ್ಯ ಮತ್ತು ಪಾಲನಾ ಉಪ ವಿಭಾಗ, ಬಿಳಿಕೆರೆ.
5. ಶ್ರೀ ಜಯಕುಮಾರ್, ಸಹಾಯಕ ಇಂಜಿನಿಯರ್(ವಿ), ಕಾ ಮತ್ತು ಪಾ ಶಾಖೆ, ಬಿಳಿಕೆರೆ
6. ಶ್ರೀ ದೊರೆರಾಜು.ಕೆ.ಸಿ, ಕಿರಿಯ ಇಂಜಿನಿಯರ್(ವಿ,, ಕಾ ಮತ್ತು ಪಾ ಶಾಖೆ, ಕೆ.ಎಸ್.ಗದ್ದಿಗೆ.
7. ಶ್ರೀ ಮಲ್ಲಿಕಾರ್ಜುನ ಎಂ, ಕಿರಿಯ ಇಂಜಿನಿಯರ್(ವಿ), ಕಾ ಮತ್ತು ಪಾ ಶಾಖೆ, ಬೋಳನಹಳ್ಳಿ.

ಸಭೆಯಲ್ಲಿ ಉಪ–ಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ವಿದ್ಯುತ್ ಗ್ರಾಹಕರ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿದೇಶದನ್ವಯ ಪ್ರತಿ ಮುರು ತಿಂಗಳಿಗೊಮ್ಮೆ ಉಪ ವಿಭಾಗದ ಮಟ್ಟದಲ್ಲಿ ಗ್ರಾಹಕ ಜನ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪ ವಿಭಾಗದ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ವಿದ್ಯುತ್ ಮಾರ್ಗಗಳಿಂದ ಉಂಟಾಗಬಹುದಾದ ಅಪಘಾತಗಳನ್ನು ತಡೆಗಟ್ಟುವಲ್ಲಿ ಸಾರ್ವಜನಿಕರು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಕೆಳಕಂಡಂತೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು.

- ವಿದ್ಯುತ್ ಕಂಬಗಳನ್ನು ಇತರೆ ಬಳಕೆಗೆ ಬಳಸಬೇಡಿ.
- ತಂತಿ ಬೇಲಿಗೆ ವಿದ್ಯುತ್ ಹರಿಸಬೇಡಿ ಇದು ಶಿಕ್ಷಾರ್ಹ ಅಪರಾಧ
- ವಿದ್ಯುತ್ ತಂತಿಗಳಿಗೆ ಸಿಲುಕಿದ ಗಾಳಿಪಟವನ್ನು ಬಿಡಿಸಲು ಪ್ರಯತ್ನಿಸಬೇಡಿ.
- ವಿದ್ಯುತ್ ಕಂಬಗಳನ್ನು ಇತರೆ ಬಳಕೆಗೆ ಬಳಸಬೇಡಿ
- ವಾಹಕನಗಳಲ್ಲಿ ಮಿತಿಗಿಂದ ಹೆಚ್ಚಾಗಿ ಸಾಮಾಗ್ರಿಗಳನ್ನು ಸಾಗಿಸಬೇಡಿ

* ಲೋಹದ ವಸ್ತುವನ್ನು ಉಪಯೋಗಿಸುವಾಗ ಮೇಲ ಹಾದು ಹೋಗಿರುವ ವಿದ್ಯುತ್ ಮಾರ್ಗದ ಬಗ್ಗ ಎಚ್ಚರ ವಹಿಸಿ.

ಮುಂದುವರೆದು ಪ್ರಸ್ತುತ ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಂದ ದೂರುಗಳನ್ನು ಸ್ವೀಕರಿಸಲಾಗಿ ಇದರ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ.ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 01 | ಶ್ರೀಮತಿ ಲಕ್ಷ್ಮಿ ಕೋಂ ಮಹದೇವ, ಚಿಕ್ಕಬೀಚನಹಳ್ಳಿ ಗ್ರಾಮ | ಶ್ರೀಮತಿ ಲಕ್ಷ್ಮಿ, ಚಿಕ್ಕಬೀಚನಹಳ್ಳಿ ಗ್ರಾಮ ರವರ ಮನೆಯ ಮೇಲೆ ಹೋಗಿರುವ ವಿದ್ಯುತ್ ಲೈನ್‌ನ್ನು ಸ್ಥಳಾಂತರಿಸುವ ಬಗ್ಗೆ. | ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು. |
| 02 | ಶ್ರೀ ತುಳಸಿರಾಮ, ಮಲ್ಲಿನಾಥಪುರ ಗ್ರಾಮ | ಜಮೀನಿನಲ್ಲಿ ಹಾದು ಹೋಗಿರುವ ವಿದ್ಯುತ್ ಲೈನ್‌ನ್ನು ಸ್ಥಳಾಂತರಿಸುವ ಬಗ್ಗೆ. | ಅರ್ಜಿದಾರರಿಗೆ ಸ್ವಯಂ ನಿರ್ವಹಣೆ ಕಾಮಗಾರಿ ಅಡಿಯಲ್ಲಿ ವಿದ್ಯುತ್ ಮಾರ್ಗ ಸ್ಥಳಾಂತರಿಸಿಕೊಳ್ಳಲು ತಿಳಿಸಲಾಯಿತು. |
| 03 | ಮಾರನಹಳ್ಳಿ ಗ್ರಾಮಸ್ಥರು | ಶ್ರೀ ರಾಮಕೃಷ್ಣೇಗೌಡ ರವರ ಜಮೀನಿನಲ್ಲಿ ಹಾದು ಹೋಗಿರುವ ವಿದ್ಯುತ್ ಲೈನ್‌ನ್ನು ಸ್ಥಳಾಂತರಿಸುವ ಬಗ್ಗೆ. | ಅರ್ಜಿದಾರರಿಗೆ ಸ್ವಯಂ ನಿರ್ವಹಣೆ ಕಾಮಗಾರಿ ಅಡಿಯಲ್ಲಿ ವಿದ್ಯುತ್ ಮಾರ್ಗ ಸ್ಥಳಾಂತರಿಸಿಕೊಳ್ಳಲು ತಿಳಿಸಲಾಯಿತು.. |
| 04 | ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಬನ್ನಿಕುಪ್ಪೆ ಗ್ರಾಮ ಪಂಚಾಯಿತಿ | ಬನ್ನಿಕುಪ್ಪೆ ಗ್ರಾಮ ಪಂಚಾಯಿತಿ ಮುಂಭಾಗ ಇರುವ ಪರಿವರ್ತಕವನ್ನು ಸ್ಥಳಾಂತರಿಸುವ ಬಗ್ಗೆ. | ಅರ್ಜಿದಾರರಿಗೆ ಸ್ವಯಂ ನಿರ್ವಹಣೆ ಕಾಮಗಾರಿ ಅಡಿಯಲ್ಲಿ ಪರಿವರ್ತಕವನ್ನು ಸ್ಥಳಾಂತರಿಸಿಕೊಳ್ಳಲು ತಿಳಿಸಲಾಯಿತು. |
| 05 | ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಹುಸ್ಸೇನ್‌ಪುರ ಗ್ರಾಮ ಪಂಚಾಯಿತಿ | ಹುಸ್ಸೇನ್‌ಪುರ ಗ್ರಾಮದ ಕುಡಿಯುವ ನೀರು ಸರಬರಾಜು ಯೋಜನೆಯ ಸ್ಥಾವರಕ್ಕೆ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕ ಕೋರಿ. | ಅರ್ಜಿದಾರರಿಗೆ ಅಂದಾಜು ಪಟ್ಟಿ ತಯಾರಿಸಿ ವಿಭಾಗ ಕಛೇರಿಗೆ ಸಲ್ಲಿಸಿರುವ ಬಗ್ಗೆ ತಿಳಿಸಲಾಯಿತು. |
| 06 | ಶ್ರೀ ಸೋಮಣ್ಣ ಅಂಗಹಳ್ಳಿ ಗ್ರಾಮ | ಆರ್.ಆರ್.ಸಂಖ್ಯೆ: AN26 Statement ಕೋರಿದರು. | ಹಿರಿಯಸಹಾಯಕರಿಗೆ ನಿಗಮದ ನಿಯಮಾನುಸಾರ ಕೋರಲಾದ ಮಾಹಿತಿ ನೀಡಲು ಸೂಚಿಸಲಾಯಿತು.. |
| 07 | ಮುಳ್ಳೂರು ಗ್ರಾಮಸ್ಥರು | ಸುಟ್ಟುಹೋಗಿರುವ ಮುಳ್ಳೂರು ಐ.ಪಿ ಪರಿವರ್ತಕವನ್ನು ಬದಲಾಯಿಸಿಕೊಡುವಂತೆ ಕೋರಿದರು. | ಸಕಾಲದಲ್ಲಿ ಪರಿವರ್ತಕದ ಬದಲಾವಣೆಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಯಿತು. |
| 08 | ಹಳೇಬೀಡು ಗ್ರಾಮಸ್ಥರು | ಸುಟ್ಟುಹೋಗಿರುವ ಪ್ರಕಾಶ್ ಐ.ಪಿ ಪರಿವರ್ತಕವನ್ನು ಬದಲಾಯಿಸಿಕೊಡುವಂತೆ ಕೋರಿದರು. | ಸಕಾಲದಲ್ಲಿ ಪರಿವರ್ತಕದ ಬದಲಾವಣೆಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಯಿತು. |

ಸ್ವೀಕರಿಸಿದ ದೂರುಗಳನ್ನು ಸರಿಪಡಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಶಾಖಾಧಿಕಾರಿಗಳಿಗೆ/ಹಿರಿಯಸಹಾಯಕರಿಗೆ ಸೂಚಿಸುತ್ತಾ 5-30 ಗಂಟೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ,

**ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)**
**ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಉಪವಿಭಾಗ,**
**ಬಿಳಿಕೆರೆ**